ಕೋಪಗೊಳ್ಳದೆ. ಚೆನ್ನಾಗಿ ಓದಿಕೊಂಡರೆ ಎಷ್ಟೆಲ್ಲಾ ಒಳಿತಾಗುವುದೆಂದು ಹೇಳಿದ. ಎಲ್ಲಿಯವರೆಗೆ ಬೇಕಾದರೂ ಓದಿಸುತ್ತೇನೆ ಅಂದ. ಅಮ್ಮನನ್ನು ಮರೆತುಬಿಡಲು ಹೇಳಿದ.

ನಾನು ಅಪ್ಪನ ಕೈಹಿಡಿದು ಬಿಕ್ಕಿ ಬಿಕ್ಕಿ ಅತ್ತೆ. ಅಪ್ಪನಿಗೂ ಅಳು ಬಂದಂತೆ ಕಾಣುತ್ತದೆ. ಅಲ್ಲಿಂದ ಎದ್ದು ಹೊರಟುಬಿಟ್ಟ. ಅತ್ತೆ ನನ್ನ ಬೆನ್ನು ಸವರಿದಳು. ಕುಡಿಯಲು ನೀರು ಕೊಟ್ಟಳು. ಆದರೂ ಅಮ್ಮನನ್ನು ಹೇಗೆ ಮರೆತುಬಿಡುತ್ತೇನೆ?

ಊಟ ಮುಗಿಸಿ ಹೊರಗೆ ಓಡುವ ತರಾತುರಿಯಲ್ಲಿ ಬಾಯಿ ಸರಿಯಾಗಿ ತೊಳೆದುಕೊಳ್ಳದೆ ಅಮ್ಮನ ಸೆರಗಿಗಾಗಿ ಹುಡುಕುತ್ತೇನೆ. ಸೌಂದರ್ಯಳ ಮನೆಯಿಂದ ತಂದು ಗೇಟು ಬದಿಗೆ ನೆಟ್ಟ ತೇರುಹೂವಿನ ಗಿಡ ಮೊದಲ ಸಲ ಹೂಬಿಟ್ಟಾಗ ಕುಣಿಯುತ್ತಾ ಕೋಣೆಯೊಳಗೆ ಹೋಗಿ ಅಮ್ಮನನ್ನು ಕರೆಯುತ್ತೇನೆ. ಸ್ಕೂಲಿಗೆ ಧರಿಸುವ ಷೂಸಿಗೆ ದೂಳು ಹಿಡಿದರೆ ಅಮ್ಮ ಪಾಲಿಶ್ ಮಾಡುತ್ತಾಳೆ ಎಂದು ಸುಮ್ಮನಿದ್ದುಬಿಡುತ್ತೇನೆ. ಟೀಚರ್ ಬೈದಾಗ ನೆನಪಾಗುತ್ತದೆ ಅಮ್ಮ ಇಲ್ಲವೆಂದು. ಆಗ ಅಳದೆ ಇರಲು ತುಂಬಾ ಕಷ್ಟಪಡುತ್ತೇನೆ.

ಅಣ್ಣ ಥೇಟು ನನ್ನ ಹೆಸರಲ್ಲೇ ಪತ್ರವೊಂದನ್ನು ಬರೆದ. ಅಲ್ಲೆಲ್ಲಾ ಚೆನ್ನಾಗಿದೆ ಎಂದು ಹೇಳಿದ. ಒಳ್ಳೆಯ ಗೆಳೆಯರು ಸಿಕ್ಕರೆಂದ. ಅಮ್ಮನಿಗಾಗಿ ಅಳುತ್ತಾ ಕೂಡದೆ ಚೆನ್ನಾಗಿ ಅಭ್ಯಾಸ ಮಾಡಲು ಹೇಳಿದ. ಆಗಾಗ ಪತ್ರ ಬರೆಯುತ್ತಿರುತ್ತೇನೆಂದ.

ಒಂದು ದಿನ ಮರೆತು ಹೋಗಿ ಅತ್ತೆಯ ಸೆರಗಿಗೆ ಬಾಯಿ ಒರೆಸಿದೆ. ಅವಳು ಹಿಂದುರುಗಿ ನನ್ನ ಕೆನ್ನೆಯ ಮೇಲೆ ಚಿಟಿಕೆ ಹಾಕಿ ನಕ್ಕಳು. ಆ ಬೇಸಿಗೆಯಲ್ಲಿ ಅಪ್ಪನಿಗೆ ಟ್ರಾನ್ಸ್‌ಫರ್ ಆಯಿತು. ಕೇಳಿ ಮಾಡಿಸಿಕೊಂಡನೆಂದು ಅತ್ತೆ ಹೇಳಿದಳು. ಹೊಸ ಊರಿಗೆ ಬಂದ ಮೇಲೆ, ಸುತ್ತಮುತ್ತಲಿನವರಿಗೆ ನನ್ನನ್ನು ತಾಯಿಯಿಲ್ಲದ ಹುಡುಗಿ ಎಂದು ಹೇಳಿದಳು. ಅಂದರೆ, ನಮ್ಮ ಅಮ್ಮ ತೀರಿಹೋದಳೆಂದು ಅರ್ಥ. ಆಗ ತುಂಬಾ ಕೋಪ ಬಂದಿತ್ತು ನನಗೆ.

“ನಮ್ಮಮ್ಮ ತೀರಿಕೊಂಡಿಲ್ಲ. ಮರಳಿ ಬರ್ತಾಳೆ. ತೀರಿಕೊಂಡಳೆಂದು ಸುಳ್ಳು ಹೇಳಿದ್ರೆ, ನಾ ಸುಮ್ಮನಿರಲ್ಲ” ಎಂದು ಅತ್ತೆಯನ್ನು ಬೈದೆ. ಅತ್ತೆ ನಕ್ಕು ಸುಮ್ಮನಾದಳು. ಅತ್ತೆಗೆ ನಾನೆಂದರೆ

